ಅಧ್ಯಕ್ಷರು.—ದಯವಮಾಡಿ ಸದಸ್ಯರೆಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೆ, ಅದರ ಬಗ್ಗೆ ಸ್ಪಷ್ಟವಾಗಿ ಪಿ.ಎ.ಸಿ.ರಿಪೋರ್ಟ್‌ನಲ್ಲಿ ಹೇಳಿದ್ದಾರೆ.

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೆ, ತಾವು ಮಾತನಾಡಲಿಕ್ಕೆ ನನ್ನ ಪರ್‌ಮಿಷನ್ ತೆಗೆದುಕೊಂಡಿಲ್ಲ, ದಯವಮಾಡಿ ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಗೋಪಾಲ ಮಯಂಕುಂದ ಕಾನಡೆ.—ಇಷ್ಟು ಮುಂದೆ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕೆಂದು ಇದೆ. ಅದನ್ನು ಈಗ ನಾನು ಸಭೆಯ ಮುಂದಿಡುತ್ತೇನೆ, ಈಗಲಾದರೂ ತಾವು ಕ್ರಮ ತೆಗೆದುಕೊಳ್ಳುತ್ತೀರಾ ?

(ಗೊಂದಲ)

ಅಧ್ಯಕ್ಷರು.—ನಾನು ಇದಕ್ಕೆ ಅರ್ಧಗಂಟೆ ಕಾಲಾವಧಿ ಚರ್ಚೆಗೆ ಅನುಮತಿ ಕೊಡುತ್ತೇನೆ. ದಯವಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಗೋಪಾಲ ಮಯಂಕುಂದ ಕಾನಡೆ.—ಅಧ್ಯಕ್ಷರೆ, ಅರ್ಧಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಕೊಡುತ್ತೇನೆ ಎಂದು ಇವತ್ತು ಹೇಳುತ್ತೀರಿ. ನಾಳೆ ಈ ಮಂತ್ರಿಗಳ ಸಬ್ಜೆಕ್ಟ ಇಲ್ಲ, ಮುಂದಿನ ವಾರ ಎಂದೂ ಹೇಳುತ್ತೀರಿ.....

(ಗೊಂದಲ)

ಅಧ್ಯಕ್ಷರು.—ಈಗ ತಾವು ಏನು ಹೇಳಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ಈಗ ನಾನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಕೊಡುತ್ತೇನೆಂದು ಹೇಳಿದ್ದೇನೆ. ದಯವಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು. ಈಗ ಇನ್ನೂ ೭ ಪ್ರಶ್ನೆಗಳು ಇವೆ, ಈಗಾಗಲೇ ಒಂದು ಗಂಟೆ ವೇಳೆ ಮುಗಿಯಿತು. ಈಗ ಈ ಪ್ರಶ್ನೆಗಳನ್ನು ಲ್ಯಾಪ್ಸ್ ಮಾಡಬೇಕೋ ಅಥವಾ ಬೇಡವೋ ಎನ್ನುವ ಬಗ್ಗೆ

ಶ್ರೀಮತಿ ನಾಗರತ್ನಮ್ಮನವರು ಈ ಸ್ಥಾನದಲ್ಲಿ ಬಹಳ ದಿವಸ ಇದ್ದುದರಿಂದ ಅವರು ಈಗ ನಾನು ಏನು ಮಾಡಬೇಕು ಎನ್ನುವುದನ್ನು ಹೇಳಬೇಕು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಒಂದು ದಿವಸಕ್ಕೆ ೨೦ ಪ್ರಶ್ನೆಗಳನ್ನು ಏತಕ್ಕೆ ಹಾಕಬೇಕು. ಪೂರಕ ಪ್ರಶ್ನೆಗಳು ಯಾವು ಇರುತ್ತವೆ ಅವುಗಳಿಗೆ ಅವಕಾಶ ಕೊಡಬೇಕು. ಎಲ್ಲಾ ಪ್ರಶ್ನೆಗಳಿಗೂ ಒಂದೇ ಮಂತ್ರ ಅಪ್ಲೈ ಮಾಡಿದರೆ ಆಗುವುದಿಲ್ಲ.

ಅಧ್ಯಕ್ಷರು.—ನಾಳೆ ಮಾತ್ರ ನಾನು ಯಾರಿಗೂ ಅವಕಾಶ ಕೊಡುವುದಿಲ್ಲ. ಮುಂದಿನ ಪ್ರಶ್ನೆಯನ್ನು ಮಾನ್ಯ ಎಸ್.ಎಸ್. ಕಡಪಟ್ಟಿಯವರು ಕೇಳಬೇಕು.

ಕೃಷ್ಣ ಕಣಿವೆಯ ನೀರಿನ ಉಪಯೋಗದ ಬಗ್ಗೆ

೨೬೮. ಶ್ರೀ ಎಸ್. ಎಸ್. ಕಡಪಟ್ಟಿ.—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೃಷ್ಣ ಕಣಿವೆಯಲ್ಲಿಯೂ ನಮ್ಮ ಪಾಲಿನ ಒಂದು ಹನಿ ನೀರನ್ನು ಬಿಟ್ಟುಕೊಡುವುದಿಲ್ಲ ಅಂತ ಈ ಸದನದಲ್ಲಿ ಹಾಗೂ ಹೊರಗೆ ಈ ರಾಜ್ಯದ ಜನತೆಗೆ ಸಚಿವರು ಭರವಸೆ ಕೊಟ್ಟಿದ್ದು ನಿಜವೆ ?

ಆ) ಹಾಗಿದ್ದಲ್ಲಿ, ಇನ್ನು ಉಳಿದಿರುವ ಕೇವಲ ೧೨ ವರ್ಷಗಳಲ್ಲಿ ಬಚಾವತ್ ಅವಾರ್ಡ್ ಪ್ರಕಾರ ಕರ್ನಾಟಕಕ್ಕೆ ಕೊಡ ಮಾಡಿದ ನೀರಿನ ಸಂಪೂರ್ಣ ಉಪಯೋಗ ಮಾಡಲಿಕ್ಕೆ ತೆಗೆದುಕೊಂಡ ನಿರ್ದಿಷ್ಟ ಕ್ರಮ ಭೌತಿಕ ಹಾಗೂ ಆರ್ಥಿಕ ಗುರಿಯಾನ್ನು ಪ್ರತಿ ವರ್ಷ ಮಾಡಲು ಉದ್ದೇಶಿಸಿದ ಗುರಿ ವಿವರ ಸಹಿತ ಕೊಡುವುದು ?

ಇ) ಕೃಷ್ಣಾ ಕಣಿವೆಯಲ್ಲಿನ ವಿವಿಧ ಯೋಜನೆಗಳಿಗೆ ಈ ವರ್ಷ ಏಪ್ರಿಲ್‌ನಿಂದಾ ಆಗಸ್ಟ್ ೧೫ರ ವರೆಗೆ ಖರ್ಚು ಮಾಡಿದ ಹಣ ಹಾಗೂ ಮಾಡಿದ ಕೆಲಸಗಳ ವಿವರ ಒದಗಿಸುವುದು ?

ಈ) ಹಾಗಿದ್ದಲ್ಲಿ ಈ ರೀತಿ ಕಡಿಮೆ ಹಣ ಖರ್ಚು ಮಾಡುವುದು ಹಾಗೂ ಕಡಿಮೆ ಕೆಲಸ ಮಾಡುವುದರಿಂದ ಮಾನ್ಯ ಸಚಿವರು ಈ ರಾಜ್ಯದ ಜನತೆಗೆ ಹಾಗೂ ಈ ಸದನಕ್ಕೆ ಕೊಟ್ಟ ಭರವಸೆಗೆ ವ್ಯತಿರಿಕ್ತ ವಾದಂತೆ ಆಗುವುದಿಲ್ಲವೆ ?

ಉ) ಹಾಗಿದ್ದಲ್ಲಿ ಕೊಟ್ಟ ಭರವಸೆಯಂತೆ ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಹೆಚ್. ಡಿ. ದೇವೇಗೌಡ, (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು.

ಆ) ೧೯೮೭-೮೮ನೇ ಸಾಲಿನಲ್ಲಿ ಕೃಷ್ಣ ನದಿ ಕೊಳ್ಳದ ಯೋಜನೆಗಳಿಗೆ ೧೮೩.೩೭ ಕೋಟಿ ರೂಪಾಯಿಗಳಷ್ಟು ಹಣವನ್ನು ನಿಗದಿಗೊಳಿಸಲಾಗಿದ್ದು ೩೭,೫೦೦ ಹೆಕ್ಟೇರುಗಳಷ್ಟು ಅಧಿಕ ನೀರಾವರಿ ಸಾಮರ್ಥ್ಯ ಕಲ್ಪಿಸುವ ಕಾರ್ಯಕ್ರಮವಿದೆ. ಮುಂಬರುವ ವರ್ಷಗಳಲ್ಲಿಯೂ ಸಹ ಪ್ರಸ್ತುತ ಸಾಲಿಗಿಂತ ಹೆಚ್ಚಿನ ಹಣವನ್ನು ಒದಗಿಸಿ ರಾಜ್ಯಕ್ಕೆ ಬಚಾವತ್ ಅವಾರ್ಡ್ ಪ್ರಕಾರ ಕೊಡ ಮಾಡಿರುವ ಕೃಷ್ಣ ಕೊಳ್ಳದ ನೀರಿನ ಪಾಲನ್ನು ಕ. ಶ. ೨೦೦೦ದ ಒಳಗೆ ಉಪಯೋಗಿಸಿಕೊಳ್ಳುವ ಕಾರ್ಯಕ್ರಮವನ್ನು ಕೈಗೊಳ್ಳಲಾಗುವುದು.

ಇ) ಪ್ರಸ್ತುತ ಸಾಲಿನಲ್ಲಿ ಜುಲೈ ತಿಂಗಳವರೆಗೆ ಕೃಷ್ಣ ಕೊಳ್ಳದ ನೀರಾವರಿ ಯೋಜನೆಗಳ ಮೇಲೆ ೨೮ ಕೋಟಿ ರೂಪಾಯಿಗಳಷ್ಟು ಖರ್ಚು ಮಾಡಲಾಗಿದೆ ಮತ್ತು ೪೨೫೦ ಹೆಕ್ಟೇರುಗಳಷ್ಟು ಅಧಿಕ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿದೆ.

ಈ) ಈ ದಿಸೆಯಲ್ಲಿ ಆದಷ್ಟು ಜಾಸ್ತಿ ಖರ್ಚು ಮಾಡಿ ಗುರಿ ಸಾಧಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತದೆ.

ಉ) ನೀಡಿರುವ ಭರವಸೆಯನ್ನು ಪೂರೈಸಲು ಎಲ್ಲಾ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಎಸ್. ಎಸ್. ಕಡಪಟ್ಟಿ.—ಇನ್ನು ೮ ತಿಂಗಳಲ್ಲಿ ಮಿಕ್ಕಿದ ಹಣ ೧೫೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದು, ಅಲ್ಲದೆ ೩೭,೫೦೦ ಹೆಕ್ಟೇರುಗಳಿಗೆ ನೀರು ಒದಗಿಸುವ ಕಾರ್ಯಕ್ರಮವಿದೆ, ಈಗ ನ್ಯಾಲ್ಕು ತಿಂಗಳಲ್ಲಿ, ನಾಲ್ಕು ಸಾವಿರ ಚಿಲ್ಲರೆ ಹೆಕ್ಟೇರುಗಳಷ್ಟಾಗುರಿ ಸಾಧಿಸಿರುವುದು ಬಹಳಷ್ಟು ಕಡಿಮೆ. ಇದನ್ನು ನೋಡಿದರೆ ಆಮೆ ವೇಗದಲ್ಲಿ ಕೆಲಸ ನಡೆಯುತ್ತಿದೆ. ಆದ್ದರಿಂದ, ಈ ವರ್ಷದ ಗುರಿಯನ್ನು ಈ ವರ್ಷದಲ್ಲಿಯೇ ಮುಗಿಸಲಿಕ್ಕೆ ಈ ಸದನಕ್ಕೆ ಹಾಗೂ ರಾಜ್ಯದ ಜನತೆಗೆ ಮಾನ್ಯ ಮಂತ್ರಿಗಳು ಭರವಸೆ ಕೊಡಬೇಕು. ನವಂಗೆ ಡೀಟೈಲ್ಸ್ ಕೊಡಿ ಎಂದು ಕೇಳಿದ್ದೆವು. ಬಹಳ ವೇಗ್ ಆಗಿ ಉತ್ತರ ಕೊಟ್ಟಿದ್ದಾರೆ. ಇಯರ್‌ವೈಸ್ ಟಾರ್ಗೆಟ್‌ನ್ನು ಕೊಡಿ ಎಂಬುದಾಗಿ ಕೇಳಿದ್ದೆವು. ಆದಕ್ಕೂ ಉತ್ತರ ಇಲ್ಲ. ಇನ್ನು ಕೇವಲ ೧೨ ವರ್ಷಗಳು ಮಾತ್ರ ಉಳಿದಿದೆ. ನನ್ನ ಮೂರನೇ ಪ್ರಶ್ನೆಗೆ ಈ ರೀತಿಯಂ ಹಾರಿಕೆ ಉತ್ತರ ಕೊಟ್ಟರೆ ಹೇಗೆ ? ಈ ಸದನಕ್ಕೆ ಹಾಗೂ ಕರ್ನಾಟಕದ ಜನತೆಗೆ ನಿಶ್ಚಿತವಾಗಿ ಉತ್ತರ ಬೇಕು. ಈ ದಿಸೆಯಲ್ಲಿ ನಿರ್ದಿಷ್ಟವಾಗಿ ಕೈಗೊಂಡಿರುವಂತಹ ಕ್ರಮಗಳೇನು ಎಂಬುದನ್ನು ಹೇಳಬೇಕು ?

ಶ್ರೀ ಹೆಚ್. ಡಿ. ದೇವೇಗೌಡ.—ಈಗಾಗಲೇ ಸನ್ಮಾನ್ಯ ವೆಂಕಟರಾಮಯ್ಯನವರ ಪ್ರಶ್ನೆಗೆ ಉತ್ತರವಾಗಿ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟೀಕರಣವನ್ನು ನೀಡಿದ್ದಾರೆ. ಮುಂದೆ ರಾಜ್ಯದ ಹಣ ಕಾಸಿನ ಪರಿಸ್ಥಿತಿ ಉತ್ತಮಗೊಂಡ ಮೇಲೆ ಇದಕ್ಕೆ ಹೆಚ್ಚಿನ ಹಣವನ್ನು ಒದಗಿಸಬಹುದು. ಈಗ ಅದಕ್ಕಿಂತ ಹೆಚ್ಚಿನ ವಿವರ ಬೇಕಾಗಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಎಸ್. ಎಸ್. ಕಡಪಟ್ಟಿ.—ಆ ರೀತಿ ಹೇಳಿದರೆ ಉಪಯೋಗ ಬೀಳುವುದಿಲ್ಲ. ೧೨ ವರ್ಷಗಳಿಗೊಳಗೆ ಪೂರ್ಣ ಮಾಡುತ್ತೇವೆಂದು ಇದೇ ಸದನದಲ್ಲಿ ಸನ್ಮಾನ್ಯ ಮಂತ್ರಿಗಳಾದ ದೇವೇಗೌಡರು ಭರವಸೆಯನ್ನು ಕೊಟ್ಟಿದ್ದರು. ಇವತ್ತು ಅವರ ಉತ್ತರ ಅವರು ಹಿಂದೆ ನೀಡಿದ ಭರವಸೆಗೆ ವಿರೋಧವಾಗಿದೆ. ಇನ್ನು ಮುಂದಾದರೂ ಆ ರೀತಿಯಾಗದಂತೆ ಈ ಸದನಕ್ಕೆ ಹಾಗೂ ರಾಜ್ಯದ ಜನತೆಗೆ ನಿರ್ದಿಷ್ಟ ಭರವಸೆಯನ್ನು ಕೊಡುವುದಕ್ಕೆ ಸಾಧ್ಯವೇ ?

SRI H. D. DEVEGOWDA.—I am unable to understand the type of answer the Hon. Member expects when the Hon.ble Chief Minister has made it clear about the resources position what more I can do ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮಂತ್ರಿಗಳು ಇಷ್ಟೊಂದು ಸಿಟ್ಟಿಂದ ಎದ್ದು ಹೇಳ ತಕ್ಕ ಅವಶ್ಯಕತೆ ಇಲ್ಲ. ಈ ಸದನದಲ್ಲಿ ಒಬ್ಬರಂ ಸದಸ್ಯರನ್ನಿ ಇನ್ನೊಬ್ಬರು ಹೆದರಿಸುವಂತಹದು ಸರಿಯಲ್ಲ. ಯಾವ ಧಾಟಿಯಲ್ಲಿ ಮಾತನಾಡಬೇಕೋ ಆ ಧಾಟಿಯಲ್ಲಿ ತಾವು ಮಾತನಾಡಬೇಕು.

ಅಧ್ಯಕ್ಷರು.—ಮುಂದೆ ಸರಿಪಡಿಸಿಕೊಳ್ಳೋಣ. ಕುಳಿತುಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇಷ್ಟೊಂದು ಸಿಟ್ಟು ಮಂತ್ರಿಗಳಿಗೆ ಏತಕ್ಕೆ ? ಆ ಸಿಟ್ಟು ಯಾರ ಮೇಲೆ ? ಏತಕ್ಕಾಗಿ ?

ಶ್ರೀ ಎಂ, ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಂತಹ ಉತ್ತರದ ಮೇಲೆ ಸಿಟ್ಟೋ ಅಥವಾ ಸದಸ್ಯರು ಆ ರೀತಿಯ ಪ್ರಶ್ನೆಯನ್ನು ಕೇಳಿದರಲ್ಲ ಎಂದು ಸಿಟ್ಟೋ ;

ಶ್ರೀ ಹೆಚ್. ಡಿ. ದೇವೇಗೌಡ.—I am sorry Mr. Kharge. ತಾವು ದಯವಾಡಿ ಆ ರೀತಿ ಇನ್‌ಟರ್‌ಪ್ರಿಟೇಷನ್ ಮಾಡಬೇಡಿ. the Hon. Member was present in the House when the Hon. Leader of the House made it clear the resources position of the State. He hes heard it carefully. I cannot help if he is not satisfied with my reply.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆದರೆ ತಾವು ಆ ಧಾಟಿಯಲ್ಲಿ ಹೇಳಿದುದ್ದು ಸರಿಯಲ್ಲ. The tune which you used was not good..... ಎಷ್ಟೋ ಕೇಳುತ್ತಾರೆ. ಹೇಳಿದ್ದು ಅರ್ಥವಾಗಲಿಲ್ಲವೆ ಎಂಬ ಅರ್ಥದಲ್ಲಿ ಹೇಳುವುದು ಸರಿಯಲ್ಲ. We have got a great respect for him because he is a senior leader. ಸದಸ್ಯರು ಕೆಳುವಂತಹ ಪ್ರಶ್ನೆಗೆ ಸಾಜನ್ಯ ರೀತಿಯಲ್ಲಿ ಉತ್ತರವನ್ನು ಹೇಳಬೇಕು.

ಶ್ರೀ ಹೆಚ್. ಡಿ ದೇವೇಗೌಡ.—ಮಾನ್ಯ ಸದಸ್ಯರು ಕರ್ನಾಟಕದ ಜನತೆಗೆ ಮೋಸ ಮಾಡುತ್ತಿದ್ದೀರಿ ಎಂಬುದಾಗಿ ಹೇಳಿದರು. ಅದಕ್ಕೆ ಹೇಳಿದ್ದು ಆ ಉತ್ತರವನ್ನು.

ಹುಮ್ನಾಬಾದ್ ಕ್ಷೇತ್ರದಲ್ಲಿ ಮಾಧ್ಯಮಿಕ ಶಾಲೆ ಪ್ರಾರಂಭಿಸಂವ ಬಗ್ಗೆ

೩೫೯. ಶ್ರೀ ಬಸವರಾಜಪಾಟೀಲ್ ಅನ್ವರಿ(ಹುಮ್ನಾಬಾದ್).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹುಮ್ನಾಬಾದ್ ಕ್ಷೇತ್ರದ ಬಾಂಗ್ಲೇರ, ಕೊಣಬಲ್ ಮತ್ತು ಕಾರವಾಡ ಗ್ರಾಮಂಗಳಲ್ಲಿ ಮಾಧ್ಯಮಿಕ ಶಾಲೆ ಪ್ರಾರಂಭಿಸಲು ಈಗ್ಗೆ ಮೂರೂ ವರ್ಷಗಳಿಂದ ಮನವಿ ಸಲ್ಲಿಸಿರುವುದು ಸರ್ಕಾರ ದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಆ ಬಗ್ಗೆ ಕ್ರಮ ಕೈಗೊಳ್ಳದಿರಲು ಕಾರಣವೇನು ?

ಇ) ಈ ಸಾಲಿನಲ್ಲಾದರೂ ಅಲ್ಲಿ ಮಾಧ್ಯಮಿಕ ಶಾಲೆಯಂನ್ನು ಪ್ರಾರಂಭಿಸಲಾಗುವುದೇ ?

ಶ್ರೀ ಜೀವರಾಜ ಆಳ್ವ (ಶಿಕ್ಷಣ ಮಂತ್ರಿಗಳು).—

ಅ) ಬಂದಿದೆ. (೮೫–೮೬ ರಲ್ಲಿ ಪ್ರಸ್ತಾವನೆ ಬಂದಿರಲಿಲ್ಲ. ೮೬–೮೭, ೮೭–೮೮ನೇ ಸಾಲಿನಲ್ಲಿ ಬಂದಿತ್ತು)

ಆ) ಸಾಧಾರಣವಾಗಿ ೮೫–೮೬ ಮತ್ತು ೮೬–೮೭ನೇ ಸಾಲಿಗೆ ಯಾವುದೇ ಪ್ರೌಢಶಾಲೆಗಳ ಮಂಜೂರಾತಿ ಮಾಡಿರುವುದಿಲ್ಲ.